## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಜಿಲ್ಲಾಧಿಕಾರಿಗಳ ಮಿಸಲೇನಿಯಸ್ ವೈಯಕ್ತಿಕ ಠೇವಣಿ ಖಾತೆಗಳನ್ನು 2017-18 ನೇ ಸಾಲಿಗೆ ಮುಂದುವರೆಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ:ಆಇ 39 ಟಿಎಆರ್ 2008 ದಿನಾಂಕ: 24-11-2009.

*****

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಆದೇಶದಲ್ಲಿ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳ ಹೆಸರಿನಲ್ಲಿರುವ ಮಿಸಲೇನಿಯಸ್ ಪಿ.ಡಿ. ಖಾತೆಗಳನ್ನು ಕರ್ನಾಟಕ ಆರ್ಥಿಕ ಸಂಹಿತೆ 286 ಎ ಪ್ರಕಾರ ಪ್ರತಿ ಆರ್ಥಿಕ ಸಾಲಿನ ಅಂತ್ಯದಲ್ಲಿ ಮುಕ್ತಾಯಗೊಳಿಸಿ ಮುಂದಿನ ಆರ್ಥಿಕ ಸಾಲಿನಲ್ಲಿ ಮುಂದುವರೆಸಲು ಇಚ್ಛಿಸಿದಲ್ಲಿ ಇಲಾಖೆಯ ನಗದು ಪುಸ್ತಕದ ಶಿಲ್ಕಿಗೂ ಹಾಗೂ ಖಜಾನೆ ಖಾತೆಯ ಶಿಲ್ಕಿಗೂ ಲೆಕ್ಕ ಹೊಂದಾಣಿಕೆ ಮಾಡಿ ದೃಢೀಕರಿಸಿದ ನಂತರ ಆರ್ಥಿಕ ಇಲಾಖೆಯ ಅನುಮತಿ ಪಡೆಯಲು ಸಂಬಂಧಪಟ್ಟ ಆಡಳಿತ ಇಲಾಖೆಯ ಮುಖಾಂತರ ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಲಾಗಿರುತ್ತದೆ.

ಜಿಲ್ಲಾಧಿಕಾರಿಗಳ ಪಿ.ಡಿ. ಖಾತೆಗಳನ್ನು ದಿನಾಂಕ: 31-3-2017ರವರೆಗೆ ಮಾತ್ರ ಮುಂದುವರೆಸಿದ್ದು, ಇಲಾಖಾ ನಗದು ಪುಸ್ತಕ ಶಿಲ್ಕಿಗೂ ಮತ್ತು ಖಜಾನೆ ಖಾತೆಯ ಶಿಲ್ಕಿಗೂ ಲೆಕ್ಕ ಹೊಂದಾಣಿಕೆ ಮಾಡಲು ಕಾಲಾವಕಾಶದ ಅವಶ್ಯಕತೆ ಇರುತ್ತದೆಯೆಂದು ಭಾವಿಸಿ ರಾಜ್ಯದಲ್ಲಿ ಬರಗಾಲವಿದ್ದು ಬರಗಾಲ ಪೀಡಿತ ಪ್ರದೇಶಗಳಿಗೆ ತುರ್ತಾಗಿ ಕಾಮಗಾರಿ/ಯೋಜನೆಗಳಿಗೆ ಸಂಬಂಧಿಸಿದ ಮೊತ್ತಗಳನ್ನು ಬಿಡುಗಡೆ ಮಾಡಲು ತೊಂದರೆ ಆಗದಂತೆ ಜೂನ್ 2017ರ ಅಂತ್ಯದವರೆಗೆ ಪಿ.ಡಿ.ಖಾತೆಯನ್ನು ಮುಂದುವರೆಸಲು ತೀರ್ಮಾನಿಸಿ ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆಇ 15 ಟಿಎಆರ್ 2017,**
**ಬೆಂಗಳೂರು, ದಿನಾಂಕ: 18-04-2017.**

ಪ್ರಸ್ತಾವನೆಯಲ್ಲಿ ತಿಳಿಸಿರುವ ಕಾರಣಗಳಿಗಾಗಿ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳ ಹೆಸರಿನಲ್ಲಿರುವ ಮಿಸಲೇನಿಯಸ್ ವೈಯಕ್ತಿಕ ಠೇವಣಿ ಖಾತೆಗಳನ್ನು ದಿನಾಂಕ:1-4-2017 ರಿಂದ ದಿನಾಂಕ:30-06-2017 ರವರೆಗೆ 2017-18ನೇ ಸಾಲಿನಲ್ಲಿ ಮುಂದುವರೆಸಲು ಅನುಮತಿ ನೀಡಲಾಗಿದೆ. ದಿನಾಂಕ:1-7-2017 ರಿಂದ ವೈಯಕ್ತಿಕ ಠೇವಣಿ ಖಾತೆಗಳನ್ನು ಮುಂದುವರೆಸಲು ಈ ಕೆಳಗಿನ ಮಾಹಿತಿಗಳನ್ನು ಜಿಲ್ಲಾಧಿಕಾರಿಗಳು ಒದಗಿಸಬೇಕಾಗುತ್ತದೆ.

....2

1. ದಿನಾಂಕ:31-03-2017 ರ ಅಂತ್ಯಕ್ಕೆ ಮಿಸಲೇನಿಯಸ್ ಪಿ.ಡಿ. ಖಾತೆಯಲ್ಲಿ ಇರುವ ವಿವಿಧ ಯೋಜನೆಗಳ ಶಿಲ್ಕಿನ ವಿವರಗಳನ್ನು ನಗದು ಪುಸ್ತಕದ ಪ್ರಕಾರ ನೀಡುವುದು.
2. ದಿನಾಂಕ:31-03-2017 ರ ಅಂತ್ಯಕ್ಕೆ ಖಜಾನೆ ಅಖೈರು ಶಿಲ್ಕಿನ ಪಟ್ಟಿ ಒದಗಿಸುವುದು.
3. ದಿನಾಂಕ: 31-03-2017ರ ಅಂತ್ಯಕ್ಕೆ ಖಜಾನೆ ಅಖೈರು ಶಿಲ್ಕಿಗೂ ಹಾಗೂ ನಗದು ಶಿಲ್ಕಿಗೂ ಲೆಕ್ಕ ಹೊಂದಾಣಿಕೆಯನ್ನು ಮಾಡಿ ವ್ಯತ್ಯಾಸವಿದ್ದಲ್ಲಿ ಸರಿಪಡಿಸಿ ಪ್ರಸ್ತಾವನೆ ಸಲ್ಲಿಸುವುದು.
4. ಹಿಂದಿನ ಸಾಲುಗಳ ಯೋಜನೆಗಳಿಗೆ ಸಂಬಂಧಿಸಿದಂತೆ ಬಳಕೆಯಾಗದೆ ಉಳಿದ ಅನುದಾನವನ್ನು ಸಂಬಂಧಪಟ್ಟ ಇಲಾಖಾ ಜಮೆ ಲೆಕ್ಕಶೀರ್ಷಿಕೆಗಳಿಗೆ ಜಮೆ ಮಾಡುವುದು.
5. ಸರ್ಕಾರದ ಆದೇಶ ಸಂ:ಆಇ 48 ಟಿಎಆರ್ 2015, ದಿ:11.5.2016ರ ಆದೇಶದಲ್ಲಿ ತಿಳಿಸಿರುವಂತೆ ಜಿಲ್ಲಾಧಿಕಾರಿಗಳ ವೈಯಕ್ತಿಕ ಠೇವಣಿ ಖಾತೆಗಳ ಮೂಲಕ ನಿರ್ವಹಿಸುತ್ತಿರುವ ಎಲ್ಲಾ ಯೋಜನೆಗಳ ಲೆಕ್ಕಗಳನ್ನು ಜಂಟಿ/ಉಪ ನಿರ್ದೇಶಕರು, ಸ್ಥಳೀಯ ಲೆಕ್ಕ ಪರಿಶೋಧನೆ ವರ್ತುಲ ಇವರಿಂದ ಲೆಕ್ಕ ಪರಿಶೋಧನೆಯನ್ನು ನಡೆಸಿರುವ ಬಗ್ಗೆ ದೃಢೀಕರಿಸಿದ ವರದಿಯ ಪ್ರತಿಯನ್ನು ಸಲ್ಲಿಸುವುದು.

ಮೇಲಿನ ವಿವರಗಳನ್ನು ಒಳಗೊಂಡ ಪ್ರಸ್ತಾವನೆಗಳನ್ನು ದಿನಾಂಕ:31-05-2017ರ ಒಳಗಾಗಿ ಆರ್ಥಿಕ ಇಲಾಖೆಗೆ ಸಲ್ಲಿಸುವಂತೆ ಹಾಗೂ ಈ ಮಾಹಿತಿಯನ್ನು ನೀಡದೇ ಇದ್ದಲ್ಲಿ ಮಿಸಲೇನಿಯಸ್ ಪಿ.ಡಿ ಖಾತೆಯನ್ನು ದಿನಾಂಕ:01-07-2017 ರಿಂದ ಮುಂದುವರೆಸಲಾಗುವುದಿಲ್ಲವೆಂದು ತಿಳಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

18.4.17
(ಹೆಚ್.ಎ. ಶೋಭ)
ಸರ್ಕಾರದ ಅಧೀನ ಕಾರ್ಯದರ್ಶಿ
(ಆರ್ಥಿಕ ನಿಯಮಗಳು, ಆಯವ್ಯಯ
ಸಂಕಲನ ಮತ್ತು ಸಮಿತಿ ಶಾಖೆ)
ಆರ್ಥಿಕ ಇಲಾಖೆ

ಇವರಿಗೆ:

1) ಮಹಾಲೇಖಪಾಲರು, (ಎ ಮತ್ತು ಎ) ಕರ್ನಾಟಕ, ಬೆಂಗಳೂರು-1.
2) ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
3) ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ.
4) ನಿರ್ದೇಶಕರು, ಖಜಾನೆ ಇಲಾಖೆ, ಪೋಡಿಯಂ ಬ್ಲಾಕ್, ಬೆಂಗಳೂರು.
5) ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳಿಗೆ.
6) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.